Water supply in the Yeyyadi industrial estate is being maintained by the D.K District Small Industries Association, Yeyyadi, Mangalore..

ESI ಆಸ್ಪತ್ರೆ

27 (143), ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ)

ಪ್ರಶ್ನೆ

ಅ) ಜಮಖಂಡಿ ನಗರದಲ್ಲಿ ಸಕ್ಕರೆ ಕಾರ್ಖಾನೆಗಳಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರು ಇರುವುದು ಬಂದಿದೆಯೇ;

ಆ) ಹಾಗಿದ್ದಲ್ಲಿ, ಬದ ಕಾರ್ಮಿಕರ ಆರೋಗ್ಯ ಕಾಪಾಡುವುದಕ್ಕಾಗಿ E.S.I.(employees state insurance) ಆಸ್ಪತ್ರೆ ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ. ಬಿ.ಎನ್.ಬಚ್ಚೇಗೌಡ (ಕಾರ್ಮಿಕ ಮತ್ತು ರೇಷ್ಮೆ ಸಚಿವರು)

ಉತ್ತರ

ಅ) ಹೌದು

ಆ) ಕಾರಾವಿ ನಿಗಮವು ಜಮಖಂಡಿ ಪ್ರದೇಶವನ್ನು ಸಮೀಕ್ಷೆ ನಡೆಸಿ ಒಟ್ಟು 1500 ಕಾರ್ಮಿಕರನ್ನು ಮಾತ್ರ ಕಾರಾವಿ ಯೋಜನೆಯ ವ್ಯಾಪ್ತಿಗೆ ಒಳಪಡಿಸಬಹುದಾಗಿದೆ ಎಂಬದಾಗಿ ಸಮೀಕ್ಷೆ ವರದಿಯಲ್ಲಿ ತಿಳಿಸಿರುವುದರಿಂದ ಈ ಪ್ರದೇಶದ ಕಾರ್ಮಿಕರಿಗೆ Insurance Medical Practitionerಪದ್ಧತಿಯ ಮುಖಾಂತರ ವೈದ್ಯಕೀಯ ಸೌಲಭ್ಯವನ್ನು ವಿಸ್ತರಿಸಲು ಸರ್ಕಾರದ ಆದೇಶ ಸಂಖ್ಯೆ ಕಾಇ 178 ಎಲ್‌ಎಸ್‌ಐ 2009, ದಿನಾಂಕ: 11–08–2008ರಲ್ಲಿ ಮಂಜೂರಾತಿಯನ್ನು ನೀಡಲಾಗಿರುತ್ತದೆ. ಪ್ರಸ್ತುತ ಕಾರಾವಿ ನಿಗಮದ ನಾರಮ್ಸ್ ಪ್ರಕಾರ ಇ.ಎಸ್.ಐ. ಆಸ್ಪತ್ರೆ, ಮಂಜೂರಾತಿ ಮಾಡುವ ಪ್ರಸ್ತಾಪ ಸರ್ಕಾರದ ಮುಂದಿರುವುದಿಲ್ಲ.

Answer

ಅ)Yes

ಆ)ESIC has conducted survey in Jamkhandi region and as per the survey report 1500 workers can be bought under the ESI scheme. As such the State Government vide its G.O.No.LD178 LSI 2009, dated: 11-08-2009 has accorded

sanction for extending Medical facilities to the Labourers of Jamkhandi region through Insurance Medical Practition system. As per ESIC norms there is no proposal before the Government to Commission a ESI Hospital in Jamkhandi region at present.

ಸಾವಳಗಿ ಹಾಗೂ ಬಬಲೇಶ್ವರ ಭಾಗದ ನೀರಾವರಿ

26 (141)

ಶ್ರೀ ಕುಲಕರ್ಣಿ ಶ್ರೀಕಾಂತ ಸುಬ್ಬರಾವ (ಜಮಖಂಡಿ)

ಪ್ರಶ್ನೆಗಳು

ಅ) ಸಾವಳಗಿ ಹಾಗೂ ಬಬಲೇಶ್ವರ ಕ್ಷೇತ್ರದ ನೀರಾವರಿಗೆ ಸರಕಾರ ನಿಗದಿ ಮಾಡಿದ ಹಣವೆಷ್ಟು ಹಾಗೂ ತೆಗೆದುಕೊಂಡ ಕ್ರಮಗಳಾವುವು;

ಆ) ಇದರಿಂದ ನೀರಾವರಿಗೆ ಒಳಪಡುವ ಪ್ರದೇಶವೆಷ್ಟು?

ಶ್ರೀ. ಬಸವರಾಜ್ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)

ಉತ್ತರಗಳು

ಅ) ಸಾವಳಗಿ ಹಾಗೂ ಬಬಲೇಶ್ವರ ಕ್ಷೇತ್ರದ ನೀರಾವರಿ ಯೋಜನೆಯ ವಿವರವಾದ ಯೋಜನಾ ವರದಿಯನ್ನು ರೂ.588.19 ಕೋಟಿಗಳಿಗೆ ತಯಾರಿಸಿ ಕರ್ನಾಟಕ ನೀರಾವರಿ ನಿಗಮದ ತಾಂತ್ರಿಕ ಸಲಹಾ ಸಮಿತಿಯ ಮುಂದೆ ಮಂಡಿಸಲಾಗಿದ್ದು, ಸಮಿತಿಯು ಕೆಲವೊಂದು ನ್ಯೂನ್ಯತೆಗಳನ್ನು ಗಮನಿಸಿ, ಅವುಗಳನ್ನು ಸರಿಪಡಿಸಲು ತಿಳಿಸಿರುತ್ತದೆ. ಅದರಂತೆ ಯೋಜನಾ ವರದಿಯನ್ನು ಸರಿಪಡಿಸಿ ಮತ್ತೊಮ್ಮೆ ಸಮಿತಿಯ ಮುಂದೆ ಮಂಡಿಸಲಾಗುವುದು. ತದನಂತರದಲ್ಲಿ ಸಮಿತಿಯು ನೀಡುವ ಅಭಿಪ್ರಾಯ/ಸಲಹೆಗಳನ್ನು ಆಧರಿಸಿ ಮುಂದಿನ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಆ) ಸಾವಳಗಿ ಹಾಗೂ ಬಬಲೇಶ್ವರ ಏತ ನೀರಾವರಿ ಯೋಜನೆಯಿಂದ ಒಟ್ಟು 19250 ಹೇಕ್ಟರ್ ಪ್ರದೇಶವನ್ನು ನೀರಾವರಿ ವ್ಯಾಪ್ತಿಗೆ ಒಳಪಡಿಸಬಹುದಾಗಿದೆ.